SR PRABHAKAR B. TELKAR.— Sir. to question (d). the answer given is,

"Among the persons in the same priority group (as far as number of attempts is considered) due weightage to the extent possible is given to the following categories while making allotment, (i) Poorer persons, (ii) Widows, (iii) Pensioners (iv) Physically handicapped persons."

Sir, now-a-days, it is very difficult to construct houses even after we get sites. Therefore, I want to know, whether the Government or B. D. A. considers the suggestion of giving some financial aid to such of those categories mentioned above for constructing houses when allotment of sites is made to them ?

SRI DHARAM SINGH.—I want a separate notice for this question.

ಶ್ರೀ ಎಂ. ಚಂದ್ರಶೇಖರ್.—ಬಿ.ಡಿ.ಎ. ರವರು ಬಡಾವಣೆಗಳನ್ನು ಮಾಡುವಂಥಾ ಸಮಯದಲ್ಲಿ ಅನೇಕ ಹಳ್ಳಿಗಳಲ್ಲಿರತಕ್ಕವರ ಜಮೀನುಗಳನ್ನು ಅಕ್ವಿಜಿಷನ್ ಮಾಡಿ ಕೊಂಡಾದ ಮೇಲೆ ಹಳ್ಳಿಯಲ್ಲಿರತಕ್ಕವರ ಕುಟುಂಬದಲ್ಲಿ ಹೆಚ್ಚಿಗೆ ಜನ ಇದ್ದು ಅವರಿಗೆ ಏನಾದರೂ ನಿವೇಶನಗಳು ಬೇಕು ಎಂದು ಕೇಳಿ ಅನೇಕ ಅರ್ಜಿಗಳು ರೀ ಕನ್ವೆ ಮಾಡಿಕೊಡಿ ಎಂದು ಅರ್ಜಿಗಳು ಬಂದಿವೆ. ಆದರೆ ಅದೇ ವಂತ್ತೆ ಕೆಲವರು ಜಮೀನುಗಳನ್ನು ಕೊಂಡುಂಕೊಂಡು ಲಾಭಕೋಸ್ಕರವಾಗಿ ಮಾರಿಕೊಳ್ಳುತ್ತಿರುವಾಗ ಇವರಿಗೆ ನೀವು ಸ್ವಲ್ಪ ಕನ್ಸಿಷನ್ ತೋರಿಸಿ ಆ ಹಳ್ಳಿಯವರಿಗೆ ರಿ ಕನ್ವೆ ಮಾಡಿಕೊಡಬೇಕಾಗುತ್ತದೆ. ಆದುದರಿಂದ ಆ ರೀತಿಯಾಗಿ ಯಾರು ಹಳ್ಳಿಯಲ್ಲಿದ್ದ ಕುಟುಂಬ ಸದಸ್ಯರುಗಳು ನಿವೇಶನವನ್ನು ರಿ ಕನ್ವೆ ಮಾಡಿಕೊಡಿ ಎಂದು ಅರ್ಜಿ ಹಾಕಿಕೊಂಡಿರುತ್ತಾರೋ ಅಂಥವರಿಗೆ ರಿಯಾಯಿತಿ ತೋರಿಸಿ ಮಾಡಿಕೊಡುವ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಧರ್ಮಸಿಂಗ್.—ಇದರ ಮೇಲೆ ವಿಚಾರ ಮಾಡಲಾಗುತ್ತದೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಈಗ ಬಿ.ಡಿ.ಎ. ಯವರು ಎಷ್ಟೋ ಹಳ್ಳಿಗಳನ್ನು ಸೇರಿಸಿ ಕೊಂಡು ಬಿಡುತ್ತಾರೆ ಆದರೆ ಆ ಹಳ್ಳಿಯಲ್ಲಿ ರೋಡ್ಸ್ ಮತ್ತು ಅಂಡರ್ ಗ್ರೌಂಡ್ ಡ್ರೈನೇಜ್‌ಗೋಸ್ಕರ ವಾಗಿ ಹೆಚ್ಚಿಗೆ ದುಡ್ಡನ್ನು ಖರ್ಚು ಮಾಡಿ ಮಾಡುವುದು ಸೂಕ್ತವಲ್ಲವೇ ? ನೀವು ಅಕ್ವೈರ್ ಮಾಡಿ ಕೊಳ್ಳುವಾಗ ಅವರ ಜಮೀನುಗಳನ್ನು ಎಕರೆಗೆ ೧೦-೧೨ ಸಾವಿರ ಕಾಂಪನ್‌ಸೇಷನ್ ಕೊಟ್ಟು ತೆಗೆದು ಕೊಂಡು ಅವರ ವೃತ್ತಿ ಜೀವನವನ್ನೇ ಹಾಳು ಮಾಡಿರುತ್ತೀರಿ ಆದುದರಿಂದ ಇವತ್ತು ಬಿ.ಡಿ.ಎ. ರವರು ಬೇರೆ ಕಡೆ ಸೈಟ್‌ಗಳನ್ನು ಮಾಡಿ ಹೆಚ್ಚಿಗೆ ದುಡ್ಡನ್ನು ಏನು ತೆಗೆದುಕೊಳ್ಳುತ್ತಾರೆ, ಆ ದುಡ್ಡಿನಿಂದ ಆ ಹಳ್ಳಿಗಳಲ್ಲಿ ರಸ್ತೆಗಳನ್ನು ಅಂಡರ್ ಗ್ರೌಂಡ್ ಡ್ರೈನೇಜ್‌ನ್ನು ಏತಕ್ಕೆ ಇಂಪ್ರೂವ್ ಮಾಡಬಾರದು ?

ಶ್ರೀ ಧರ್ಮಸಿಂಗ್.—ಒಳ್ಳೆಯ ಸಲಹೆ ಕೊಟ್ಟಿದ್ದಾರೆ ಅವರ ಬಗ್ಗೆ ಕೂಡ ವಿಚಾರ ಮಾಡೋಣ. ಅಕ್ವೈರ್ ಮಾಡಿಕೊಂಡಂಥ ಹಳ್ಳಿಗಳಲ್ಲಿ ಕೂಡ ಡೆವಲಪ್‌ಮೆಂಟ್ ವರ್ಕ್ ಆಗ ಬೇಕೆಂದು ಹೇಳುತ್ತಿದ್ದಾರೆ ಅದರ ಬಗ್ಗೆ ಕೂಡ ವಿಚಾರ ಮಾಡುತ್ತೇವೆ.

Facilities to the Students of I.T.I. at Bangalore and Hubli

509 SRI M. G. JARATARGAR (Hubli)—Will the Minister for Labour be pleased to state.

(a) the total number of applications received to undergo training at the Industrial Training Institute Training Centre, Hubli, for the last three years of 1978-79, 1979-80 and 1980-81 out of them, the number of Scheduled Castes and Scheduled Tribes,

(b) the training facilities made available to the students at the I.T.I. Bangalore and at the I.T.I. Hubli, and the number of admissions at these two places,

(c) whether it has come to the notice of Government that Students belonging to Schedeled Castes/Scheduled Tribes, Backward Classes and Minorities are unable to get admissions though there were many unemployed poor labourers in the Industrially Backward area of Dharwad District, if so, whether action will be taken to double the number of admissions,

(d) whether measures be taken to provided employment orientated training facilities at this centre for the benefit of poor people namely.—(1) Production of Agricultural Implements (2) Electrical Motor Winding Repairing (3) Motor Mechanical (4) Radio & Television Engineering and (5) Pumpset and Oil Engine Mechanical on the lines of modern technical training facilities existing at the I.T.I Bangalore,

(e) whether the admission would be provided to the students in the age group of 16 to 30 years during the current year to those who have not been able to get admissions for the last 3 to 4 years in the centre and have become over aged ?

SRI A. B. JAKANUR (Minister for Labour)—

The total number of applications received for admission during 1978, 1979 and 1980	Out of them	
	Applications received from Scheduled Castes	Applications received from Scheduled Tribes
11,666	186	14

(b) The particulars of training imparted in different Trades at the Industrial Training Centres at Bangalore and Hubli, are as follows.—

Year	Industrial Training Institute, Bangalore	Industrial Training Institute Hubli
1978	Trades of one year duration	Trades of one year duration
	Mechanical (Diesel), Moulder Carpentry, Sheet-metal, Welder Cutting and Tailoring, Stenography. (English) Non-Technical.	Sheet-metal, Welder, Stenography (English-Non Technical) Mechanical (Diesel).
	Trades of two years' duration. Fitter, Machinist, Machinist, (Grinder), Turner, Wireman, Mechanic (Motor Vehicle), Draughtsman (Mechanical) Electrician, Mechanical (Radio and Television). Tool and Dye Maker, Mechanic (General Electronics). Instrument Mechanic,	Trades of two years' duration. Fitter, Mechanist, Mechinist (Grinder), Turner, Wireman, Drauahtsman (Mechanical) Electrician, Mechanics (Motor vehicles Draughtsman (Civil)
1979	Trades of One Year duration.	Trades of One Year duration.
	Mechanic (Diesel), Moulder, Sheet, Metal Welders, Cutting and Tailoring, Stenography, (English Non-Technical).	Sheet-metal Welder. Mechanical (Diesel), Stenography (English-Non-Technical).

1	2	3
	Trades of Two Years' duration Fitter, Machinist. Machinist, (Grinder) Turner. Wireman, Mechanic (Motor vehicle) Draughtsman (Machanical) Electrician, Mechanic (Radio & Television) Tool and dye maker, Mechanic (General Electronics), Mechanic, (Mill wright) Electroplater, Pattern maker, Instrument mechanic.	Trades of Two Years' duration. Fitter, Machinist, (Grinder Turner Wireman, Draughts man (Mechanical) Electrician, Draughtsman (Civil), Pattern maker, Mechanic (Motor Vehicles).
1980	Trades of One Year duration.	Trade of One Year duration.
	Mechanic (Diesel). Moluder. Sheet-metal Welder, Cutting and Tailoring. Stenography, (English Non-Technical)	Sheet-metal Welder, Stenography (English-Non-Technical).
	Trades of Two Years' duration.	Tradesof Two Years duration.
	Fitter, Mechinist, Mechanist (Grinder), Turner, Wireman, Mechanic (Motor rehicle) Draughtsman (Mechanical Electrician, Mechanic (Radio and Television) Tool and Dye Makers, Mechanic (General Electrician	Fitter, Mechanist, Mechinist, (Grinder), Turner, Wireman, Draughtsman (Mechanical) Electrician, Mechanic (Motor Vehicle).

Year of admission	1978	1979	1980	1978	1979	1980
Total number of Students to be admitted	636	668	556	272	304	240

(c) No

(d) There is no such proposal

(e) No.

ಶ್ರೀ ಎಂ.ಜಿ. ಜಗತಾರಗರ್.—ಉತ್ತರದಲ್ಲಿ ಪ್ರವೇಶ ಕೋರಿ ಬಂದ ಒಟ್ಟು ಅರ್ಜಿಗಳು ೧೧,೬೬೬ ಎಂದು ಹೇಳಿದ್ದೀರಿ ಇದರಲ್ಲಿ ಬೆಂಗಳೂರಿನಲ್ಲಿ ೧೯೭೮ರಲ್ಲಿ ೬೩೬ ಇದ್ದರೆ ೧೯೮೦ರಲ್ಲಿ ೫೫೬ ಜನಕ್ಕೆ ಪ್ರವೇಶ ಸಿಕ್ಕಿದೆ ಅದೇ ರೀತಿ ಹುಬ್ಬಳ್ಳಿಯಲ್ಲಿ ೧೯೭೮ರಲ್ಲಿ ೨೭೨ ಜನಕ್ಕೆ ಪ್ರವೇಶ ಸಿಕ್ಕಿದೆ ೧೯೮೦ರಲ್ಲಿ ೨೪೦ ಜನಕ್ಕೆ ಪ್ರವೇಶ ಸಿಕ್ಕಿದೆ. ಆದುದರಿಂದ ಇವತ್ತು ಹುಬ್ಬಳ್ಳಿಯಲ್ಲಿ ಪ್ರವೇಶ ದೊರೆಯುವ ಸಂಖ್ಯೆ ಕಡಿಮೆ ಇರುವುದರಿಂದ ಅದನ್ನು ಡಬ್ಬಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ.ಬಿ. ಜಕನೂರ್.—ಅದನ್ನು ಈಗ ಸದ್ಯಕ್ಕೇ ಮಾಡುವುದಕ್ಕೆ ಶಕ್ಯವಿಲ್ಲ. ಹಣದ ಕೊರತೆ ಮತ್ತು ಬಿಲ್ಡಿಂಗ್ ಮಿಷನರಿ ಎಲ್ಲದರ ಅಭಾವವಿದೆ ಆದುದರಿಂದ ಸಧ್ಯದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ.ಜಿ. ಜರತಾರಗರ್.—ನಮ್ಮ ಹುಬ್ಬಳ್ಳಿಯಲ್ಲಿ ಮಿಷನರಿ ಇದೆ, ಗೋಡೌನ್‌ಗಳಿವೆ, ಅಲ್ಲಿ ಎಲ್ಲಾ ಸೌಲತ್ತುಗಳಿದ್ದಾಗ್ಯೂ ಕೂಡ ತಾವು ಹೆಚ್ಚಿಗೆ ಮಾಡುವುದಕ್ಕೆ ಆಗುತ್ತಿಲ್ಲವೆಂದು ಹೇಳುತ್ತಿದ್ದೀರಿ. ಆದುದರಿಂದ ಶಿಫ್ಟ್ ಪದ್ಧತಿಯಲ್ಲಿಯಾದರೂ ಮಾಡಿದರೆ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಆ ದೃಷ್ಟಿಯಿಂದ ಹೇಳಬಯಸುತ್ತಿದ್ದೇನೆ.

ಶ್ರೀ ಎ.ಬಿ. ಜಕನೂರ್,—ಶಿಫ್ಟ್ ಪದ್ಧತಿ ಮಾಡುವುದಕ್ಕೆ ಶಕ್ಯವಾಗುತ್ತದೆಯೋ ಇಲ್ಲವೋ ಎನ್ನುವುದನ್ನು ಹುಬ್ಬಳ್ಳಿಗೆ ಬಂದಾಗ ಪರಿಶೀಲಿಸಿ ನೋಡುತ್ತೇನೆ. ಅಲ್ಲಿಗೆ ಬಂದಾಗ ಬಿಲ್ಡಿಂಗ್ ವಗೈರೆ ಎಲ್ಲಾ ಪರಿಶೀಲಿಸಿ ನೋಡುತ್ತೇನೆ.

ಶ್ರೀ ಎಂ. ಗಂಗಣ್ಣ.—ಕೈಗಾರಿಕಾ ತರಬೇತಿ ಪಡೆದ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಸಿಗುತ್ತಿಲ್ಲವೆಂದು ಸರ್ವವಿಧಿತವಾಗಿದೆ. ಈ ದೃಷ್ಟಿಯಿಂದ ಮಾನ್ಯ ಸದಸ್ಯರು ಆ ಅಭ್ಯರ್ಥಿಗಳ ಪ್ರವೇಶ ಸಂಖ್ಯೆಯನ್ನು ದ್ವಿಗುಣಗೊಳಿಸುತ್ತೀರಾ ಎಂದು ಕೇಳಿದ್ದಾರೆ. ಅದಕ್ಕೆ ತಾವೇನು ಹೇಳುತ್ತೀರಿ ?

ಶ್ರೀ ಎ.ಬಿ. ಜಕನೂರ್.—ಪ್ರವೇಶವನ್ನು ನೀಡುವಾಗ ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ನಾವು ನೀಡುತ್ತಿದ್ದೇವೆ. ಇಂಥದ್ದಕ್ಕೆ ಇಂತಿಷ್ಟೇ ಕೊಡಬೇಕೆಂದು ಇಲ್ಲ. ಪ್ರತಿಯೊಂದು ಟ್ರೇಡ್‌ನಲ್ಲೂ ರಿಸರ್ವೇಷನ್ ಇದೆ. ಈ ಪ್ರಕಾರ ಆದಷ್ಟು ಸಂಬಂಧಪಟ್ಟ ವರ್ಗದವರಿಗೆ ಹೋಗುತ್ತದೆ. ಹರಿಜನ-ಗಿರಿಜನರ ಪ್ರವೇಶಾವಕಾಶ ಸಂಖ್ಯೆಯನ್ನು ದ್ವಿಗುಣಗೊಳಿಸುವುದಕ್ಕಾಗುವುದಿಲ್ಲ.

ಶ್ರೀ ಕೆ. ರಾಮಭಟ್.—ಒಟ್ಟು ಪ್ರವೇಶ ಕೋರಿ ಬಂದ ಅರ್ಜಿಗಳ ಸಂಖ್ಯೆ ೧೧ ಸಾವಿರದ ಚಿಲ್ಲರೆ ಎಂದು ಹೇಳಿದ್ದೀರಿ. ಅವುಗಳ ಪೈಕಿ ಎಷ್ಟು ಅರ್ಜಿಗಳನ್ನು ಸ್ವೀಕಾರ ಮಾಡಿ ಪ್ರವೇಶಾವಕಾಶವನ್ನು ನೀಡಿದ್ದೀರಿ ?

ಶ್ರೀ ಎ.ಬಿ. ಜಕನೂರ್.—ಮೂರು ವರ್ಷಗಳಿಂದ ಬಂದ ಅರ್ಜಿಗಳ ಸಂಖ್ಯೆಯನ್ನು ಕೊಟ್ಟಿದ್ದೇವೆ ಒಂದೊಂದು ಟ್ರೇಡಿಗೆ ಇಂತಿಷ್ಟು ಸೀಟುಗಳು ಎಂದು ನಿಗದಿ ಮಾಡಲಾಗಿದೆ. ಅಲ್ಲಿ ನಾನಾ ರೀತಿಯ ಟ್ರೇಡುಗಳಿವೆ. ಆದ್ದರಿಂದ ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಉತ್ತರಿಸುತ್ತೇನೆ.

ಶ್ರೀ ಕೆ. ರಾಮಭಟ್.—ಇದು ಮೂಲ ಪ್ರಶ್ನೆಯಿಂದ ಉದ್ಭವವಾಗತಕ್ಕ ಉಪಪ್ರಶ್ನೆ. ಇದಕ್ಕೆ ಬೇರೆ ಪ್ರಶ್ನೆ ಕೇಳಬೇಕೆಂದು ಹೇಳುತ್ತಿದ್ದಾರೆ, ಆದುದರಿಂದ, ದಯವಿಟ್ಟು ಮಾನ್ಯ ಅಧ್ಯಕ್ಷರು ಈ ಬಗ್ಗೆ ನಿರ್ದೇಶನ ಕೊಡಬೇಕು.

(ಉತ್ತರ ಇಲ್ಲ)

ಶ್ರೀ ಎಂ.ಜಿ. ಜರತಾರಗರ್.—ಧಾರವಾಡ ಜಿಲ್ಲೆಯನ್ನು ಕೈಗಾರಿಕೆಗಳಲ್ಲಿ ಹಿಂದುಳಿದ ಪ್ರದೇಶ ಎಂದು ಗುರುತಿಸಲಾಗಿದೆ. ಇಂಥ ಸಂದರ್ಭದಲ್ಲಿ. ಬೆಂಗಳೂರಿನಲ್ಲಿ ಕೊಡುತ್ತಿರತಕ್ಕ ತರಬೇತಿಗಳನ್ನು ಅಲ್ಲಿ ನೀಡುತ್ತಿಲ್ಲ. ಇಲ್ಲಿ ಮೋಟಾರ್ ರಿಪೇರಿ, ರೇಡಿಯೋ ರಿಪೇರಿ ಇತ್ಯಾದಿ ತರಬೇತಿಗಳನ್ನು ನೀಡಲಾಗುತ್ತಿದೆ. ಆದರೆ ಹುಬ್ಬಳ್ಳಿ-ಧಾರವಾಡದಲ್ಲಿ ಏಕೆ ನೀಡುತ್ತಿಲ್ಲ ? ಅಲ್ಲಿಯೂ ಕೂಡ ಈ ತರಬೇತಿಗಳನ್ನು ನೀಡುತ್ತೀರಾ ?

ಶ್ರೀ ಎ.ಬಿ. ಜಕನೂರ್.—ಮೋಟಾರ್ ಮೆಕ್ಯಾನಿಕಲ್ ಈಗಾಗಲೇ ಹುಬ್ಬಳ್ಳಿಯಲ್ಲಿ ಇದೆ. ಉಳಿದವನ್ನು ಇಂಟ್ರಡ್ಯೂಸ್ ಮಾಡಿಲ್ಲ. ಅದಕ್ಕೆಲ್ಲ ಬಿಲ್ಡಿಂಗ್ ಮತ್ತಿತರ ಅನುಕೂಲಗಳು ಬೇಕು. ಆದುದರಿಂದ ಅವನ್ನೆಲ್ಲ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಜಿ. ಜರತಾರಗರ್.—ರೇಡಿಯೋ ಮೆಕ್ಯಾನಿಕಲ್ ಅನ್ನು ಆರ್ಥಿಕ ಪರಿಸ್ಥಿತಿ ನೋಡಿ ಕೊಂಡು ಮುಂದಿನ ಯೋಜನೆಯಲ್ಲಾದರೂ ಮಾಡುತ್ತೀರಾ ?

ಶ್ರೀ ಎ.ಬಿ. ಜಕನೂರ್.—ಅದನ್ನು ಪರಿಶೀಲಿಸಲಿಕ್ಕೇನು ತೊಂದರೆ ಇಲ್ಲ. ಆದರೆ ಅದಕ್ಕೆ ಬೇಕಾದ ಸ್ಥಳಾವಕಾಶ ಇಲ್ಲ. ಈಗ ಹಣಕಾಸಿನ ತೊಂದರೆಯಿರುವುದರಿಂದ ಅದು ಸಾಧ್ಯವಾಗುತ್ತಿಲ್ಲ. ನಂತರ ಮಾಡುವುದಕ್ಕೇನು ಅಡ್ಡಿಯಿಲ್ಲ.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಇಪತ್ತಿನ ದಿವಸಈ ಕೋರ್ಸುಗಳನ್ನು ಮಾಡಿಕೊಂಡವರಿಗೆ ಕೆಲಸ ಸಿಗುವ ಅನುಕೂಲ ಇರುವುದರಿಂದ ಒಂದೇ ಐ.ಟಿ.ಐ ನಲ್ಲಿ ಸೀಟುಗಳನ್ನು ದ್ವಿಗುಣಗೊಳಿಸುವುದಕ್ಕಾಗುವುದ ಕ್ಕಾಗದಿದ್ದರೆ ಪೆಟ್ಟಾಗಿ ಇನ್‌ಸ್ಟಿಟ್ಯೂಟ್‌ಗಳನ್ನು ತೆರೆಯುತ್ತೀರಾ? ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳಿದ್ದರೂ ಅಲ್ಲ ತರಬೇತಿ ಹೊಂದಿದವರಿಗೆ ಕೆಲಸ ಸಿಗುವುದು ಕಷ್ಟ ೧೧ ಸಾವಿರ ಆರ್ಜಿಗಳನ್ನು ಹಾಕಿರುವ ಪರಿಸ್ಥಿತಿ ಇರುವಾಗ ಸೀಟುಗಳನ್ನಾದರೂ ದ್ವಿಗುಣಗೊಳಿಸಿ ಅಥವಾ ಹೆಚ್ಚಿಗೆ ತರಬೇತಿ ಕೇಂದ್ರಗಳನ್ನಾದರೂ ತೆಗೆದು ಹೆಚ್ಚು ಜನರಿಗೆ ತರಬೇತಿ ದೊರೆಯುವಂತೆ ಮಾಡುತ್ತೀರಾ ?

ಶ್ರೀ ಎ.ಬಿ. ಜಕನೂರ್.—ಈಗ ಆರ್ಥಿಕ ತೊಂದರೆಯಿರುವುದರಿಂದ ಹೆಚ್ಚು ಸೀಟುಗಳನ್ನು ಆಗಲಿ ಅಥವಾ ಹೆಚ್ಚು ಐ.ಟಿ.ಐ. ಗಳನ್ನಾಗಲೀ ತೆರೆಯುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಹೆಚ್ಚು ಜನರಿಗೆ ತರಬೇತಿ ಅವಕಾಶ ಸಿಗುವ ಹಾಗೆ ಮಾಡಲು ಪ್ರಾಸಗಿಯವರು ಯಾರಾದರೂ ಮುಂದೆ ಬಂದರೆ ಅವರಿಗೆ ಸಂಸ್ಥೆಗಳನ್ನು ತೆರೆಯಲು ಅನುಮತಿ ನೀಡುತ್ತೇವೆ. ಈ ರೀತಿಯಾಗಿ ಈ ವರ್ಷ ೨-೩ಕ್ಕೆ ಅನುಮತಿ ನೀಡುತ್ತಿದ್ದೇವೆ. ಆದರೆ ಸರ್ಕಾರದ ಪತಿಯಿಂದ ತೆರೆಯಲು ಆರ್ಥಿಕ ಮುಗ್ಗಟ್ಟಿನಿಂದಾಗಿ ಸಾಧ್ಯವಾಗುತ್ತಿಲ್ಲ. ಮುಂದೆ ಆರ್ಥಿಕ ಪರಿಸ್ಥಿತಿ ಸುಧಾರಿಸಿದ ನಂತರ ಇನ್ನೂ ಕೆಲವು ಪ್ರದೇಶಗಳಲ್ಲಿ ತರಬೇತಿ ಕೇಂದ್ರಗಳನ್ನು ತೆರೆಯುತ್ತೇವೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಪ್ರಾಸಗಿಯವರು ಮುಂದೆ ಬಂದರೆ ಅವರಿಗೆ ಗ್ರಾಂಟ್ ಇನ್ ಏಡ್ ಕೊಡುತ್ತೀರಾ ?

ಶ್ರೀ ಎ.ಬಿ. ಜಕನೂರ್.—ಗ್ರಾಂಟ್ ಇನ್ ಏಡ್ ಕೊಡುವುದಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಕೊಡದಿದ್ದರೆ, ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಂತೆ ಅಲ್ಲೂ ಕ್ಯಾಪಿಟೇಷನ್ ಫೀ ಪ್ರಾರಂಭವಾಗುತ್ತದೆ. ಆಂದಾಗ ದುಡ್ಡು ಇದ್ದವರಿಗೆ ಮಾತ್ರ ಸೀಟು ಸಿಗುತ್ತದೆ. ಆದರಿಂದ ಬಡಪರಿಗೆ ಏನು ಉಪಯೋಗವಾಗುವುದಿಲ್ಲ. ಸಾಮಾನ್ಯವಾಗಿ ಈ ಕೋರ್ಸಿಗೆ ಬರುವವರು ಬಡಪರೇ ಹೆಚ್ಚು. ಎಸ್.ಎಸ್.ಎಲ್.ಸಿ. ಆದಮೇಲೆ ಮುಂದೆ ಓದುವುದಕ್ಕೆ ಶಕ್ತಿ ಇಲ್ಲದವರು ಈ ಕೋರ್ಸುಗಳಿಗೆ ಅರ್ಜಿ ಹಾಕಿಕೊಳ್ಳುತ್ತಾರೆ. ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡಬೇಕೆಂದರೆ ಇದನ್ನು ಅಗತ್ಯವಾಗಿ ಪರಿಶೀಲಿಸಬೇಕು.

ಶ್ರೀ ಎ.ಬಿ. ಜಕನೂರ್.—ಪರಿಶೀಲಿಸೋಣ.